# ಸ್ವಾಭಿಮಾನಕ್ಕಿಲ್ಲ ಸೋಲು

## ಜಾತಿ ದೌರ್ಜನ್ಯಕ್ಕೆ ಕೊನೆ



*lawyering for change*

ಪರ್ಯಾಯ ಕಾನೂನು ವೇದಿಕೆಯು ಮಾನವ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುವ ವಕೀಲರ ಸಮೂಹವಾಗಿದೆ. ಪರ್ಯಾಯ ಕಾನೂನು ವೇದಿಕೆಯು ಕಾನೂನು ನೆರವು ಹಾಗೂ ಸಂಶೋಧನೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಬದ್ಧತೆಯನ್ನು ಹೊಂದಿದೆ.

**ಪ್ರಕಟಣೆ**: *April 14, 2024* ರಂದು
**ಕಲೆ (ಇಲ್ಲಸ್ಟ್ರೇಷನ್)**: ವೈಷ್ಣವಿ ಗಿರಿಧರನ್ ಮತ್ತು ಮಣಿವರ್ಮ
**ಸಂಭಾಷಣೆ ಬರಹ ಮತ್ತು ಸಂಕಲನ ನೆನಕೆಗಳು**: ಕಲ್ಪನಾ ಚಕ್ರವರ್ತಿ ಮತ್ತು ಚಿತ್ರಾ ಐಯ್ಯರ್
**ವಿಶೇಷ ಧನ್ಯವಾದಗಳು**: ದು. ಸರಸ್ವತಿ ಮತ್ತು ಶಿವಮಣಿದನ್ ಎಸ್. ಇವರ ಸಲಹೆ , ಪ್ರೋತ್ಸಾಹ ಇಲ್ಲದೆ ಈ ಪುಸ್ತಕ ತರಲು ಸಾಧ್ಯವಾಗುತ್ತಿರಲಿಲ್ಲ.
**ಸಂಪಾದಕೀಯ ಮತ್ತು ಸಂಶೋಧನೆ ತಂಡ:** ನರಸಿಂಹಪ್ಪ.ಟಿ ವಿ, ಬಸವ ಪ್ರಸಾದ ಕುನಾಲೆ, ವಿನಯ್ ಶ್ರೀನಿವಾಸ. ಕೆ, ಪೂರ್ಣ ರವಿಶಂಕರ್, ಐಶ್ವರ್ಯ ರವಿಕುಮಾರ್, ಅಶ್ವಿನಿ ಭೋದ್.

ನಿಮ್ಮ ಪ್ರತಿಕ್ರಿಯೆಗಳನ್ನು ಈ ವಿಳಾಸಕ್ಕೆ ಕಳುಹಿಸಿ: *contact@altlawforum.org*

# ಮುನ್ನುಡಿ

ಪರಿಶಿಷ್ಟ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ದೌರ್ಜನ್ಯ (ತಡೆ) ಕಾಯಿದೆಯು ಪುರಾತನ ಭಾರತೀಯ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವ ಗುರಿಯನ್ನು ಹೊಂದಿದೆ. 25 ಸೆಕ್ಷನ್ ಗಳು ಸೇರಿದಂತೆ ಹಲವು ನಿಯಮಗಳನ್ನು ಹೊಂದಿರುವ ಈ ಕಾಯಿದೆಯು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಸಮುದಾಯಗಳ ವ್ಯಕ್ತಿಗಳ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದ ವ್ಯಕ್ತಿಗಳು ನಡೆಸುವ 42 ತಾರತಮ್ಯದ ನಡವಳಿಕೆಗಳನ್ನು ಪಟ್ಟಿಮಾಡಿ ವ್ಯಾಖ್ಯಾನಿಸಿದೆ. ಈ ಕಾಯಿದೆಯು ಅವುಗಳನ್ನು ಅಪರಾಧಗಳು ಎಂದು ಘೋಷಿಸಿ, ಸದರಿ ಅಪರಾಧಗಳಿಗೆ 6 ತಿಂಗಳ ಜೈಲುಶಿಕ್ಷೆಯಿಂದ ಮರಣ ದಂಡನೆಯವರೆಗೂ ಶಿಕ್ಷೆಯನ್ನು ಸೂಚಿಸಿದೆ. ಮುಂದುವರೆದು, ಈ ಕಾಯಿದೆಯಡಿಯಲ್ಲಿ ನಡೆಯುವ ಅಪರಾಧಗಳ ತನಿಖೆಯನ್ನು ಉಪ ಪೋಲೀಸ್ ಅಧೀಕ್ಷಕರು (ಡಿವೈಎಸ್.ಪಿ) ನಡೆಸಬೇಕೆಂದು ವಿವರಿಸಿರುವ ಕಾಯಿದೆಯು, ಜಾತಿ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ಕೂಲಂಕುಷವಾಗಿ, ಕ್ಷಿಪ್ರಗತಿಯಲ್ಲಿ ಹಾಗೂ ನ್ಯಾಯಯುತವಾಗಿ ನಡೆಸುವ ಸಲುವಾಗಿ ಡಿವೈಎಸ್ಪಿ ಹಾಗೂ ಅದಕ್ಕೂ ಮೇಲಿನ ಹಂತದ ಅಧಿಕಾರಿಗಳು ಮಾತ್ರ ಕಡ್ಡಾಯವಾಗಿ ನಡೆಸಬೇಕೆಂದು ವಿಧಿಸಿದೆ.

ಜಾತಿ ದೌರ್ಜನ್ಯದ ಸಂತ್ರಸ್ಥರ ಹಕ್ಕುಗಳನ್ನು ಈ ಕಾಯಿದೆಯು ಮೂರು ವಿಶಿಷ್ಟ ರೀತಿಯಲ್ಲಿ ರಕ್ಷಿಸುತ್ತದೆ:

- ಮೊದಲಿಗೆ, ಇದು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಂತ್ರಸ್ಥರ ಹಕ್ಕುಗಳನ್ನು ರಕ್ಷಿಸುತ್ತದೆ. ಇದು ನಿರ್ದಿಷ್ಟ ಪ್ರದೇಶಗಳನ್ನು ದೌರ್ಜನ್ಯ-ಪೀಡಿತ ಪ್ರದೇಶಗಳೆಂದು ಘೋಷಿಸುವ ಮೂಲಕ ಹಾಗೂ ಸದರಿ ಪ್ರದೇಶಗಳಲ್ಲಿ ಕಡ್ಡಾಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸುತ್ತದೆ.
- ಎರಡನೆಯದಾಗಿ, ನ್ಯಾಯಾಲಯದ ಕಾರ್ಯಕಲಾಪಗಳು ನಡೆಯುವಾಗ, ಎಲ್ಲಾ ಸಂದರ್ಭಗಳಲ್ಲಿಯೂ ಸಂತ್ರಸ್ಥರಿಗೆ ಪೋಲೀಸ್ ರಕ್ಷಣೆಯನ್ನು ನೀಡುವಂತೆ ತಿಳಿಸುತ್ತದೆ.
- ಮೂರನೆಯದಾಗಿ, ನಗದು ಅಥವಾ ಇನ್ನಿತರ ಪರಿಹಾರ ಕ್ರಮದ ಮೂಲಕ, ಸಂತ್ರಸ್ಥರಿಗೆ ಪುನರ್ವಸತಿಯನ್ನು ಖಾತ್ರಿಪಡಿಸುವ ಮೂಲಕ ಸಂತ್ರಸ್ಥರ ಹಕ್ಕುಗಳನ್ನು ರಕ್ಷಿಸುತ್ತದೆ.

ಆದಾಗ್ಯೂ, ಈ ಉತ್ತಮ ಕಾಯಿದೆಯ ಪರಿಣಾಮದ ಕುರಿತು ಕೂಲಂಕುಷವಾಗಿ ನೋಡಿದಾಗ, ಅದರ ಅನುಷ್ಠಾನವು ಇನ್ನೂ ಪ್ರಪಾತದಲ್ಲೇ ಉಳಿದಿರುವುದು ಕಾಣುತ್ತದೆ. ರಾಷ್ಟ್ರೀಯ ಮಟ್ಟದ ದಲಿತ ಸಂಘಟನೆಗಳು ನಡೆಸಿದ ಅಧ್ಯಯನದ ಪ್ರಕಾರ, 1991 ರಿಂದ 2021 ರ ಅವಧಿಯ ನಡುವೆ 15 ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳ ಮೇಲೆ ನಡೆದ ಅಪರಾಧಗಳ ಸಂಖ್ಯೆಯಲ್ಲಿ ಶೇ.177.6% ಹಾಗೂ ಪರಿಶಿಷ್ಟ ಪಂಗಡ ಸಮುದಾಯಗಳ ವಿರುದ್ಧದ ಅಪರಾಧಗಳ ಸಂಖ್ಯೆಯಲ್ಲಿ ಶೇ. 111.2% ಏರಿಕೆ ಕಂಡಿದೆ. ಇದೇ ರೀತಿ, 2023 ರಲ್ಲಿ ಕರ್ನಾಟಕ ಸರ್ಕಾರವು ಈ ಕಾಯಿದೆಯ ಅನುಷ್ಠಾನವನ್ನು ಪರಿಶೀಲಿಸಲು ರಚಿಸಿದ ಉನ್ನತ ಮಟ್ಟದ ಸಮಿತಿಯ ಪ್ರಕಾರ, ಎಸ್ ಸಿ, ಎಸ್ ಟಿ ಸಮುದಾಯಗಳ ವಿರುದ್ಧ ನಡೆಯುವ ಪ್ರಕರಣಗಳಲ್ಲಿ ಆಗುವ ಶಿಕ್ಷೆಯ ಪ್ರಮಾಣ ಕನಿಷ್ಟ ಶೇ. 3.44% ರಷ್ಟಿದೆ. ಒಟ್ಟು 2491 ಪ್ರಕರಣಗಳು ಇದ್ದು 1,100 ಪ್ರಕರಣಗಳಲ್ಲಿ, ಮೊಕದ್ದಮೆ ದಾಖಲಾಗಿ ಎರಡು ತಿಂಗಳುಗಳಾದರೂ ಸಹ ಚಾರ್ಜ್‌ಶೀಟ್ ಹಾಕಿರುವುದಿಲ್ಲ. ಹಲವಾರು ಪ್ರಕರಣಗಳಲ್ಲಿ ಮೇಲ್ಜಾತಿ ಸಮುದಾಯಗಳಿಂದ ದಬ್ಬಾಳಿಕೆ ಮಾಡುವ ಭಯದ ಕಾರಣ, ಕಾನೂನಿನ ಬಗ್ಗೆ ಅರಿವು ಇಲ್ಲದಿರುವುದು ಹಾಗೂ ಪೋಲೀಸರ ನಿರ್ಲಕ್ಷ್ಯತೆಯ ಕಾರಣ, ಎಸ್ .ಸಿ. /ಎಸ್ ಟಿ ಸಮುದಾಯಗಳ ಮೇಲೆ ನಡೆಯುವ ದೌರ್ಜನ್ಯಗಳು ವರದಿಯಾಗುವುದೇ ಇಲ್ಲವೆಂದು, 2021 ರಲ್ಲಿ ಭಾರತದ ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ಈ ಮೇಲಿನ ಕಾರಣಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ (ತಡೆ) ಕಾಯಿದೆಯ 1989 ಕುರಿತು ಜಾಗೃತಿ ಮೂಡಿಸಲು ಹಾಗೂ ಅದರ ಕುರಿತು ಕಾನೂನಿನ ಅರಿವನ್ನು ಹೆಚ್ಚಿಸಲು ಪರ್ಯಾಯ ಕಾನೂನು ವೇದಿಕೆಯು ಹಲವು ಕಾನೂನು ಅರಿವು ಕಾರ್ಯಾಗಾರಗಳನ್ನು ಕೈಗೊಂಡಿದೆ. ಸಾಮಾಜಿಕ ಕಾರ್ಯಕರ್ತರು ಹಾಗೂ ಎಸ್.ಸಿ, ಎಸ್.ಟಿ ಸಮುದಾಯದ ಜನರೊಂದಿಗೆ ಕಾನೂನು ಅರಿವು ಶಿಬಿರಗಳು ಆಯೋಜಿಸುತ್ತಿದ್ದೇವೆ. ಇದರ ಜೊತೆಗೆ, ಈ ಕಾಯಿದೆಯನ್ನು ಸರಳವಾಗಿ ಅರ್ಥಮಾಡಿಸಲು ಕೈಪಿಡಿಗಳನ್ನು ತಯಾರಿಸಿದ್ದೇವೆ .

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರು ಕಾನೂನಿನಲ್ಲಿ ವಿಶ್ವಾಸವಿಡುವಂತೆ ಪ್ರೇರೇಪಿಸಲು, ಕಠಿಣ ಪರಿಸ್ಥಿತಿಯಲ್ಲಿ ಅವರಿಗೆ ನೆರವಾಗಲು ಕಾಲ್ಪನಿಕ ಕಥೆಯುಳ್ಳ ಈ ಕಿರು ಪುಸ್ತಕವನ್ನು ತಂದಿದ್ದೇವೆ. ಈ ಕಾಯಿದೆಯ ಬಗ್ಗೆ ಈ ಸಮುದಾಯಗಳ ಜನರೊಂದಿಗೆ, ಪೊಲೀಸರು ಹಾಗೂ ಸರ್ಕಾರಿ ವಕೀಲರೊಂದಿಗೆ ಕೆಲಸ ಮಾಡಿ, ನಾವು ಕಲಿತಿದ್ದೇನೆಂದರೆ - ಈ ಕಾಯಿದೆ ಅಡಿಯಲ್ಲಿ ಜನರು ನ್ಯಾಯವನ್ನು ಪಡೆಯುವುದು ಸವಾಲಾಗಿದೆ. ಈ ಕಥೆಯ ಗುರಿ ಕಾನೂನಿನ ಕುರಿತು ಜಾಗೃತಿಯನ್ನು ಮೂಡಿಸುವುದಾಗಿದೆ. ಈ ಕಥೆಯು ಮಾದರಿ ಸನ್ನಿವೇಶದ ನಿರೂಪಣೆಯಾಗಿದೆ, ಇದು ವಾಸ್ತವ ಅಲ್ಲ, ನಿಜ. ಆದರೂ, ನಮ್ಮ ಓದುಗರು ಇದರಿಂದ ಸ್ಪೂರ್ತಿ ಪಡೆದು, ಜಾತಿ ದೌರ್ಜನ್ಯದಂತಹ ಪ್ರಕರಣಗಳನ್ನು ಯಾವುದೇ ಭಯವಿಲ್ಲದೆ ವರದಿ ಮತ್ತು ಕಾನೂನು ಹೋರಾಟ ಮಾಡುತ್ತಾರೆ ಎಂಬ ಭರವಸೆ ಇದೆ. ಅತ್ಯಂತ ಪ್ರಮುಖವಾಗಿ, ನಮ್ಮ ಓದುಗರು ಜಾತಿ ತಾರತಮ್ಯದ ಕುರಿತು ಅರಿವುನ್ನು ಹೊಂದಿ, ಅದು ಹೇಗೆ ವ್ಯಕ್ತಿಗಳ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎಂದು ಅರಿತುಕೊಳ್ಳುತ್ತಾರೆ ಎಂಬ ನಂಬಿಕೆ ನಮಗಿದೆ.




ಹಳ್ಳಿಯ ನಕ್ಷೆ: ನೆಲಬಾಳು ಗ್ರಾಮ


ಸಿಟ್ಟಿನಿಂದ ಬುಸುಗುಡುತ್ತಿರುವ ಶಿವರಾಮಯ್ಯ ಕೆರೆಯ ಬಳಿ ತನ್ನ ಹಿಂಬಾಲಕರೊಂದಿಗೆ ಮಾತನಾಡುತ್ತಿದ್ದಾನೆ.
ಈ ವರ್ಷ ಕೆರೆ ಮೀನ್ ಹಿಡಿಯೋಕೆ ಟೆಂಡರ್ ಕರೆದಿದ್ದಾರಂತೆ. ಇಲಾಖೆ ಎಲ್ಲರ ಅರ್ಜಿಗಳನ್ನು ಸ್ವೀಕರಿಸುತ್ತಿದ್ದಾರಂತೆ. ಈ ಸರ್ಕಾರಕ್ಕೆ ತಲೆ ಇಲ್ಲವಾ? ಆ ಕೆಳಜಾತಿಯವರ ಅರ್ಜಿನೂ ತಗೋಳುತ್ತಾರಂತೆ. ಇವ್ರನ್ನ ಹಿಂಗೆ ಚಿಗುರೋಕ್ ಬಿಟ್ರೆ ನಮ್ ತಲೆ ಮೇಲೆನೆ ಕೂರ್ತರೆ, ಈಗಲೇ ಇವ್ರ್ ಬಾಲ ಕಟ್ ಮಾಡ್ಬೇಕು.
ಆ ಆಂಜಿನಪ್ಪ ಅರ್ಜಿ ಕೊಟ್ಟಿದ್ದಾನಾ? ಕೆಲವೇ ಅಕ್ಷರಗಳನ್ನು ಕಲಿತ, ಅವನು ತಾನು ವಿದ್ಯಾವಂತನೆಂದು ಭಾವಿಸುತ್ತಾನೆಯೇ? ಅವನು ತುಂಬಾ ಚಿಗುರುಕೊಂಡಿದ್ದಾನೆ.
ಹೌದು ಬುದ್ದಿ. ಹಂಗಂತ ಯಾರೋ ಹೇಳಿದರು. ಈ ಸಲ ಟೆಂಡರ್ ಅವನಿಗೆ ಆಗಬಹುದು ಅಂತನೂ ಹೇಳುತ್ತಿದ್ದಾರೆ.. ನಿಮಗೆ ಯಾಕೆ ಆ ಚಿಂತೆ? ನಾವೇನ್ ಸುಮ್ಮನೆ ಬಿಡ್ತಿವಾ ? ಅದೇನು ಅಣ್ಣಮ್ಮನ ತೇರಾ ನೋಡಿಕೊಂಡು ಕೂರೋಕೆ? ಒಂದು ಕೈ ನೋಡೇ ಬಿಡೋಣ.


ಆಂಜಿನಪ್ಪ ಮತ್ತು ಸರೋಜ ಇಡೀ ದಿನ ಊರೆಲ್ಲಾ ಸುತ್ತಿ ಮೀನು ಮಾರಿ ಸುಸ್ತಾಗಿ ಸಂಜೆ ಮನೆಗೆ ಬಂದಿದ್ದಾರೆ.
ನನಗೆ ಯಾಕೋ ಭಯ ಆಗುತ್ತಿದೆ. ಇವೆಲ್ಲ ನಿನಗೆ ಯಾಕೆ ಬೇಕು? ಅವರು ನಮ್ಮ ಜಾತಿಯವರನ್ನ ಬೆಳೆಯೋಕೆ ಬಿಡುತ್ತಾರ? ಆ ಜಯಮ್ಮನ ಗಂಡ ಟೀ ಅಂಗಡಿ ಹಾಕಿದ್ದಕ್ಕೆ ಅವರ ಸಂಸಾರನ ಬೀದಿಗೆ ತಂದಿದ್ದು ನಿನಗೆ ನೆನಪಿಲ್ವಾ?
ಟೆಂಡರ್ ಕರಿಯೋದು ಸರ್ಕಾರದ ನಿಯಮ. ಯಾವ ಜಾತಿಯವರು ಬೇಕಾದರೂ ಅರ್ಜಿ ಹಾಕಬಹುದು. ಮೇಲ್ಜಾತಿಯವರ ಇಷ್ಟ ಕಷ್ಟ ಯಾರು ಕೇಳುತ್ತಾರೆ? ಈ ಸಲ ಟೆಂಡರ್ ನಮಗೆ ಸಿಕ್ಕಿದರೆ ನಮ್ಮ ಕಷ್ಟ ಕಡಿಮೆ ಆಗಬಹುದು, ಯೋಚನೆ ಮಾಡಿದ್ದೀಯಾ?
ಇರಬಹುದು ಆದರೂ ನಾವು ದಲಿತರು. ಮೇಲ್ಜಾತಿಯವರ ಜೊತೆ ಹೋರಾಡೋ ಶಕ್ತಿ ನಮಗೆ ಇದೆಯೇ? ನಮ್ಮ ಜನಕ್ಕೆ ಯಾವತ್ತಾದರೂ ಒಳ್ಳೆಯದು ಆಗೋಕೆ ಬಿಟ್ಟಿದ್ದಾರಾ? ನನಗೆ ಯಾಕೋ ಭಯ ಆಗುತ್ತಿದೆ.

**ತಾಲ್ಲೂಕು ಕಛೇರಿಯ ಕಾಂಪೌಂಡಿನಲ್ಲಿ ಆಂಜಿನಪ್ಪ ಸರ್ಕಾರಿ ಅಧಿಕಾರಿಯೊಂದಿಗೆ ಮಾತನಾಡುತ್ತಿರುವುದನ್ನು, ಶಿವರಾಮಯ್ಯನ ಶಿಷ್ಯ ನಿಂಗಪ್ಪ ನೋಡುತ್ತಾನೆ.**




ನನಗೆ ತುಂಬಾ ಭಯ ಆಗುತ್ತಿದೆ ಆಂಜಿ. ಅವರ ಜೊತೆ ನಮಗೆ ಹೊಡೆದಾಡೋ ಶಕ್ತಿ ಇದಿಯಾ? ಅರ್ಜಿ ವಾಪಸ್ ತಗೋ.
ಇದೊಳ್ಳೆ ಕಥೆ ಆಯಿತಲ್ಲ ಸರೋಜ! ಸರ್ಕಾರ ಯಾರಿಗೆ ಬೇಕಾದ್ರೂ ಟೆಂಡರ್ ಕೊಡುತ್ತೆ. ಯಾರೋ ಏನೋ ಮಾಡ್ತಾರೆ ಅಂತ ಭಯ ಪಡುವುದಕ್ಕೆ ಆಗುತ್ತಾ? ನಾವು ಈ ದೇಶದ ಪ್ರಜೆಗಳು. ಸಂವಿಧಾನ ಎಲ್ಲರಿಗೂ ಹಕ್ಕು ಕೊಟ್ಟಿದೆ.
ಸ್ವಲ್ಪ ಸಮಾಧಾನ ಮಾಡಿಕೋ. ದೇವಸ್ಥಾನಕ್ಕೆ ಹೋಗಿ, ಒಳ್ಳೇಯದು ಮಾಡಪ್ಪ ಅಂತ ಕೇಳ್ಕೊಂಡು ಬಾ.
ತನ್ನ ಜಾತಿಯ ಜನರನ್ನು ದೇವಸ್ಥಾನದ ಒಳಗೆ ಬಿಡೋದಿಲ್ಲ ಎಂದು ಗೊತ್ತಿದ್ದ ಸರೋಜಾ , ಆಚೆ ನಿಂತುಕೊಂಡು ಪ್ರಾರ್ಥಿಸುತ್ತಾಳೆ.


ದೈವ ಮತವ ಮುಂದೆ ಮಾಡಿ
ನಮಗೆ ಮೋಸ ನಡೆದಿದೆ
ಅನ್ಯಾಯಕ್ಕೆ ಅನ್ಯಾಯ
ಮುಯ್ಯಿಗೆ ಮುಯ್ ಮುಂದಿದೆ.
- ಡಾ. ಸಿದ್ದಲಿಂಗಯ್ಯ ಅವರ ಕವಿತೆಯ ಆಯ್ದ ಭಾಗ
ಓಹೋ! ಶಿವರಾಮಯ್ಯ ಅವರನ್ನೇ ಎದುರು ಹಾಕಿಕೊಂಡು , ಅವರು ಕಟ್ಟಿಸಿರೋ ಗುಡಿಗೇ ಬಂದಿದ್ದೀಯಾ ಸರೋಜಾ? ನಿನ್ನ ಧೈರ್ಯ ಮೆಚ್ಚಲೇಬೇಕು. ಎಲ್ಲಿದಾನೇ ನಿನ್ನ ಗಂಡಾ?
ಗುಡಿಯೊಳಗಿರೋ ನಮ್ಮಪ್ಪ ಊರಾಚೆ ಇರುವ ನಮ್ಮಂತವರನ್ನು ಕಾಪಾಡಪ್ಪ!
ಅವನಿಗೆ ಅಷ್ಟು ದುರಹಂಕಾರನಾ? ಈ ಜಾತಿ ಅವರಿಗೆ ಈ ಊರಲ್ಲಿ ಕೆಲಸ ಮಾಡಕ್ಕೆ ಬಿಟ್ಟಿದ್ದೇ ತಪ್ಪಾಯಿತು. ಶಿವರಾಮಯ್ಯ ಅಂದ್ರೆ ಏನಂದ್ಕೊಂಡಿದ್ದಾನೆ? ಅವನ ಜಾತಿ ಜನ ತುಟಿಕ್ ಪಿಟಿಕ್ ಅಂದ್ರೆ ಹೊಸ್ಕಾಕ್ಬಿಡ್ತೀವಿ.


ಟೀ ಅಂಗಡಿಯಲ್ಲಿ
ಟೀ ಹೇಳಿ ಅರ್ಧ ಗಂಟೆ  ಆಯ್ತು. ಇನ್ನು ಎಷ್ಟು ಹೊತ್ತು ಕಾಯಬೇಕು?
ಟೆಂಡರ್ ಅರ್ಜಿ ಹಾಕಿರೋದಕ್ಕೆ ಇಷ್ಟು ಧಿಮಾಕು ಬಂದಿದ್ದೀಯ? ನಿನ್ ಜಾತಿ ಜನಕ್ಕೆ ಟೀ ಅಲ್ಲ, ಒಂದು ತೊಟ್ಟು ನೀರ್ ಕೂಡ ಕೊಡಲ್ಲ!
ಟೀ ಅಂಗಡಿಯವನು ಹಾಗು ಅಲ್ಲಿರುವ ಇತರರು ಸೇರಿ ಆಂಜಿನಪ್ಪನಿಗೆ ಬೆದರಿಸುತ್ತಾರೆ.
ನಾವು ದಲಿತರು ಅಂತ ಎಷ್ಟು ಸಹಿಸಿಕೊಳ್ಳೋದು? ಈ ಸಲ ಟೆಂಡರ್ ನನಗೆ ಸಿಗಲಿ. ನಿಮಗೆಲ್ಲ ಗ್ರಹಚಾರ ಬಿಡಿಸ್ತೀನಿ ಹುಷಾರ್!
ಅಂಗಡಿಯಲ್ಲಿದ್ದ ಜನರು ಆಂಜಿನಪ್ಪನ ಮೇಲೆ ಹಲ್ಲೆ ಮಾಡುತ್ತಾರೆ.


ಈಗ ನೋಡು ಆಂಜಿ! ಎಲ್ಲರೂ ನಮ್ಮನ್ನ ದ್ವೇಷ ಮಾಡುತಿದ್ದಾರೆ. ಬೇಡ ಬೇಡ ಅಂತ ಬಡೆದುಕೊಂಡೆ.
ಆಂಜಿನಪ್ಪ! ಕೆರೆ ಹತ್ತಿರ ಬರಬೇಕೆಂದು ಶಿವರಾಮಯ್ಯ ಹೇಳಿ ಕಳಿಸಿದ್ದಾರೆ.
ಬರ್ತೀನಿ ನಡಿ...ಗುಡಿಯೊಳಗೆ ಬಿಡಲಿಲ್ಲ ಅಂದ್ರೆ, ಹೋಟಲ್ ಅಲ್ಲಿ ನೀರು ಕೊಡಲಿಲ್ಲ ಅಂದ್ರೆ, ನಾನೇನು ಭಯ ಬಿದ್ದು ಟೆಂಡರ್ ಅರ್ಜಿ ವಾಪಸ್ ತಗೋತೀನಿ ಅಂದುಕೊಳ್ಳಬೇಡ.
ಹೋಗಬೇಡ ಆಂಜಿ, ನನಗ್ಯಾಕೋ ಟೆನ್ಷನ್ ಆಗ್ತಿದೆ.
ನೀನು ಟೆನ್ಷನ್ ತಗೋಬೇಡ. ಅವನು ಊರಿಗೆ ಸಾಹುಕಾರ ಆದ್ರೆ, ನಾನೇನು ಮಾಡೋಕ್ಕಾಗುತ್ತೆ? ನೀನು ಸಮಾಧಾನವಾಗಿರು ಊಟದ ಹೊತ್ತಿಗೆ ಮನೆಗೆ ಬರ್ತೀನಿ.



ಕತ್ತಲಾಗಿತ್ತು. ಒಬ್ಬರು ಮಹಿಳೆ ಬಂದು ಸರೋಜಾಳ ಮನೆಯ ಬಾಗಿಲು ಬಡಿಯುತ್ತಾರೆ.
ಬೇಗ ಹೊರಡು. ನಿನ್ನ ಗಂಡ ಆ ಪಾಳುಬಿದ್ದ ಹೊಲದಲ್ಲಿ ಪ್ರಜ್ಞೆ ಕಳೆದುಕೊಂಡು ಬಿದ್ದಿದ್ದಾನೆ.
ಆ ರಮೇಶ, ನಿನ್ನ ಗಂಡನ್ನ ಶಿವರಾಮಯ್ಯನ ಹತ್ತಿರ ಕರೆದುಕೊಂಡು ಹೋದ. ಈಗ ನೋಡು ಏನಾಯಿತು.
ಶಿವರಾಮಯ್ಯ ನನ್ನ ಎದುರು ಹಾಕಿಕೊಂಡೋರಿಗೆ ಇದೇ ಗತಿ.
ಅಯ್ಯೋ ದೇವರೇ! ಏನಾಯ್ತು? ನಿಮಗೆ ಯಾರು ಏನು ಮಾಡಿದ್ರು?
ಅವರ ಜೀವಕ್ಕೆ ಏನು ಅಪಾಯ ಇಲ್ಲ. ಆದರೆ, ಅವರು ಮುಂಚೆಯಂತೆ ಓಡಾಡಲು ಸ್ವಲ್ಪ ಸಮಯ ಆಗುತ್ತದೆ.
ಸರೋಜ ತನ್ನ ಕುಟುಂಬದ ಭವಿಷ್ಯದ ಬಗ್ಗೆ ಚಿಂತಿಸುತ್ತಿದ್ದಾಳೆ.


ಕೆಲವು ದಿವಸಗಳ ನಂತರ, ಸರೋಜಾಳ ಮಗಳು ನೇತ್ರ ಶಾಲೆಯಲ್ಲಿ
ನೇತ್ರ, ನಿಮ್ಮಮ್ಮ ಯಾಕೆ ನಮ್ಮ ಮನೆ ಕಡೆ ಬರಲೇ ಇಲ್ಲ? ಮೀನು ಮಾರೋಕೆ ಹೋಗುತ್ತಿಲ್ಲವಾ? ಹೀಗಾದರೇ ನಿಮ್ಮ ಜೀವನ ಹೇಗೆ?
ಟೀಚರ್, ನಮ್ಮಮ್ಮ ಯಾವಾಗಲೂ ಅಳುತ್ತಲೇ ಇರುತ್ತಾರೆ. ನೀವು ಸಂವಿಧಾನದ ಪಾಠ ಮಾಡಿದಾಗ ಹೇಳಿದ ಕಾನೂನು, ನ್ಯಾಯದ ಬಗ್ಗೆ ತಿಳಿಸಿ ಧೈರ್ಯವಾಗಿ ಇರೋದಕ್ಕೆ ಹೇಳಿದ್ದೀನಿ. ಆದರೂ ಅವರು ನನ್ನ ಮಾತು ಕೇಳುತ್ತಲೇ ಇಲ್ಲ ಟೀಚರ್. ಪ್ಲೀಸ್ ನಮ್ಮ ಮನೆಗೆ ಬನ್ನಿ, ಅಮ್ಮನಿಗೆ ಸ್ವಲ್ಪ ಧೈರ್ಯ ಹೇಳಿ.


ನೇತ್ರಾಳ ಟೀಚರ್ ಅವಳ ಮನೆಗೆ ಬರುತ್ತಾರೆ.
ಸರೋಜ, ಹೀಗೆ ಮೂಲೆಲಿ ಕುಳಿತುಕೊಂಡರೇ ಹೇಗೆ? ನಮ್ಮ ಜಾತಿಯವರಿಗೆ ಇದೇನು ಹೊಸದಾ? ನೀನೇ ಧೈರ್ಯ ಕಳೆದುಕೊಂಡರೆ, ಮಕ್ಕಳ ಗತಿ ಏನು? ಒಂದು ಪೊಲೀಸ್ ಕಂಪ್ಲೇಂಟ್ ಕೊಡಬಾರದೇ?
ಮೇಡಮ್ಮೋರೆ, ಒಂದು ಹೊತ್ತು ಊಟಕ್ಕೂ ಕಷ್ಟ ಆಗ್ತಿರೋ ನನಗೆ, ಪೊಲೀಸು, ಕೋರ್ಟು ಅಂತ ಅಲಿಯೋಕ್ಕಾಗುತ್ತಾ ? ನನ್ನ ಮಕ್ಕಳಿಗೆ ಒಂದು ದಾರಿ ಆದರೆ ನನಗೆ ಅಷ್ಟೇ ಸಾಕು.
ಮೇಲ್ಜಾತಿ ಮಕ್ಕಳಿಗೆ ನಾನು ಪಾಠ ಮಾಡುತ್ತೇನೆ ಅಂತ ನನಗೆ ಎಷ್ಟು ತೊಂದರೆ ಕೊಟ್ಟರು ಗೊತ್ತಾ. ನಾನು ಕೆಲಸ ಬಿಡುವಷ್ಟು ಬೇಜಾರಾಗಿತ್ತು. ಮಕ್ಕಳ ಪ್ರೀತಿ ನೋಡಿ ಧೈರ್ಯ ಮಾಡಿಕೊಂಡೆ. ಕಾನೂನು ನನ್ನ ಪರ ಇದೆ, ಅದಕ್ಕೆ ನನ್ನ ಕೆಲಸ ಉಳಿಸಿಕೊಂಡೆ.



ಸರೋಜ ನಿನಗಾಗಿರುವ ಅನ್ಯಾಯ , ನಮ್ಮ ದೇಶದಲ್ಲಿ ದಿನನಿತ್ಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿರುವ ಅನೇಕರಿಗೆ ಆಗುತ್ತಿದೆ. ಸರ್ಕಾರದ ಅಂಕಿ-ಅಂಶಗಳ ಪ್ರಕಾರ.

- ಪ್ರತಿ ದಿನ ಇಬ್ಬರು ಎಸ್ ಸಿ / ಎಸ್ ಟಿ ಸಮುದಾಯದವರ ಕೊಲೆಯಾಗುತ್ತದೆ.
- ಪ್ರತಿ ನಾಲ್ಕು ಘಂಟೆ ಗೆ ಒಮ್ಮೆ ಎಸ್ ಸಿ / ಎಸ್ ಟಿ ಸಮುದಾಯದ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ.
- ಪ್ರತಿ ಎರಡು ಗಂಟೆಗೆ ಎಸ್ ಸಿ / ಎಸ್ ಟಿ ಸಮುದಾಯದ ಒಬ್ಬ ಪ್ರಜೆಯ ಮೇಲೆ ಹಲ್ಲೆ ಆಗುತ್ತದೆ.
- ಪ್ರತಿ ತಿಂಗಳು 18 ಎಸ್ ಸಿ / ಎಸ್ ಟಿ ಸಮುದಾಯದವರ ಮನೆ ಅಥವಾ ಆಸ್ತಿಯನ್ನು ಸುಟ್ಟು ಹಾಕಲಾಗುತ್ತಿದೆ.
- ಪ್ರತಿ ವಾರವೂ 11 ಜನ ಎಸ್ ಸಿ / ಎಸ್ ಟಿ ಸಮುದಾಯದವರನ್ನು ಅಪಹರಣ ಮಾಡಲಾಗುತ್ತಿದೆ.

ಇಂತಹ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲೇ ಎಸ್ ಸಿ / ಎಸ್ ಟಿ ಕಾಯ್ದೆ (ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ (ದೌರ್ಜನ್ಯ ತಡೆಗಟ್ಟುವ) ಕಾಯ್ದೆ 1989) ಜಾರಿಯಾಗಿದೆ.

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿರುವ ವ್ಯಕ್ತಿಯ ಮೇಲೆ ಯಾರೇ ದೌರ್ಜನ್ಯ ಎಸೆಗಿದರೂ ಈ ಕಾನೂನು ಅಡಿಯಲ್ಲಿ ಕೂಡಲೇ ಬಂಧಿಸಲಾಗುವುದು. ಲೈಂಗಿಕ ದೌರ್ಜನ್ಯ, ಆಸ್ತಿ ಹಾನಿ, ಕೊಲೆ , ದರೋಡೆ, ಜಾತಿ ನಿಂದನೆ ಇಂತಹ ಯಾವುದೇ ಅಪರಾಧವಾದರೂ, ಈ ಕಾಯ್ದೆ ನಮ್ಮ ನೆರವಿಗಿದೆ. ದೂರು ದಾಖಲಾದ ಕೂಡಲೇ, ಸಂತ್ರಸ್ಥ ಕುಟುಂಬದ ನಿತ್ಯ ಜೀವನಕ್ಕೆ ಆಧಾರವೆಂದು ಧನ ಸಹಾಯ ಮತ್ತಿತರ ಸಹಕಾರಗಳನ್ನು ಸರ್ಕಾರದಿಂದಲೇ ಕೊಡಲಾಗುತ್ತದೆ. ಹಾಗಾಗಿ ಆ ಕುಟುಂಬದ ಸದಸ್ಯರು ಬೇರೆ ಯಾರ ಬಳಿಯೂ ಕೈಚಾಚದೆ ಧೈರ್ಯವಾಗಿರಬಹುದು. ಅಷ್ಟೇ ಅಲ್ಲದೆ, ದೂರು ದಾಖಲಿಸುವ ಕುಟುಂಬಕ್ಕೆ ದಿನದ 24 ಘಂಟೆಯು ಪೊಲೀಸ್ ರಕ್ಷಣೆ ನೀಡಲಾಗುವುದು. ಈ ಕಾಯ್ದೆ ಜಾರಿಗೊಂಡಿರುವುದೇ ಪರಿಶಿಷ್ಠ ಜಾತಿ ಹಾಗು ಪರಿಶಿಷ್ಠ ಪಂಗಡದ ಜನರು ಸಮಾನತೆಯಿಂದ, ಘನತೆಯಿಂದ ಬದುಕಲು; ಅವರು ತಮ್ಮ ಹಕ್ಕುಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಚಲಾಯಿಸುವಂತೆ ಸಾಧ್ಯ ಮಾಡಲು, ಈ ಕಾಯ್ದೆಯ ಸಹಾಯದಿಂದ ನಿನ್ನ ಗಂಡನ ಹಲ್ಲೆಗೆ, ನಿನ್ನ ಕುಟುಂಬಕ್ಕೆ ಆದ ಅನ್ಯಾಯಕ್ಕೆ ನ್ಯಾಯ ದೊರಕಿಸಬಹುದು.



ನನಗೆ ಇದೆಲ್ಲ ಗೊತ್ತೇ ಇರಲಿಲ್ಲ . ಕಾನೂನು ನಮ್ಮ ಪರ ಇರೋದಾದರೆ ನಾವು ಯಾಕೆ ಹೀಗೆ ಎಲ್ಲವನ್ನು ಸಹಿಸಿಕೊಂಡಿರಬೇಕು?


ಪೊಲೀಸ್ ಠಾಣೆ (ಮರುದಿನ ಸರೋಜಾ ಪೊಲೀಸ್ ಠಾಣೆಗೆ ಹೋಗುತ್ತಾರೆ.)
ನಮಸ್ಕಾರ ಸರ್. ನಾನು ಎಸ್ ಸಿ / ಎಸ್ ಟಿ ಕಾಯ್ದೆಯಡಿ ದೂರು ಕೊಡಲು ಬಂದಿದ್ದೇನೆ.
ಸರ್ಕಾರ ಹೊರಡಿಸಿದ್ದ ಟೆಂಡರ್ ಗೆ ನನ್ನ ಗಂಡ ಅರ್ಜಿ ಹಾಕಿದ್ದರು . ಅದನ್ನು ಹಿಂಪಡೆಯುವಂತೆ ಮೇಲ್ಜಾತಿಯ ಶಿವರಾಮಯ್ಯ ಮತ್ತು ಅವರ ಸ್ನೇಹಿತರಾದ ರಮೇಶ್ ಮತ್ತು ನಿಂಗಪ್ಪ ಒತ್ತಾಯ ಮಾಡುತ್ತಿದ್ದರು. ನನ್ನ ಗಂಡ ಅರ್ಜಿಯನ್ನು ಹಿಂಪಡೆಯದ ಕಾರಣ, ಅವರನ್ನು ಸಾಯೋ ಹಾಗೆ ಹೊಡೆದಿದ್ದಾರೆ.
ಸರೋಜ ಅನಕ್ಷರಸ್ತೆಯಾಗಿದ್ದರಿಂದ ಪೊಲೀಸ್ ಅಧಿಕಾರಿಯು, ತನ್ನ ಕರ್ತವ್ಯದ ಅಡಿಯಲ್ಲಿ ದೂರನ್ನು ಬರೆದು ಅದನ್ನು ಗಟ್ಟಿಯಾಗಿ ಓದಿ ತಿಳಿಸುತ್ತಾರೆ . ಆಕೆ ಎಲ್ಲವನ್ನು ಒಪ್ಪಿದನಂತರ ಸಹಿ ಮಾಡುತ್ತಾಳೆ. ಎಫ್.ಐ.ಆರ್ ಪ್ರತಿಯನ್ನು ಉಚಿತವಾಗಿ ಪಡೆದುಕೊಳ್ಳುತ್ತಾಳೆ.


ಮಾರನೆಯ ದಿವಸ ಸರೋಜ ಎಂದಿನಂತೆ ಮೀನು ಮಾರಲು ಹೋದಾಗ ಶಿವರಾಮಯ್ಯನ ಶಿಷ್ಯ ರಮೇಶ್ ಅಡ್ಡಹಾಕುತ್ತಾನೆ.
ಏನು ಸರೋಜಾ? ಪೊಲೀಸರಿಗೆ ದೂರು ಕೊಟ್ಟಿದ್ದೀಯಂತೆ. ನನಗೆ ಅರ್ಥ ಆಗುತ್ತೆ ನಿನ್ನ ಕಷ್ಟ. ಪಾಪ ದುಃಖದಲ್ಲಿದ್ದೀಯಾ. ಏನಾದರೂ ಸಹಾಯ ಮಾಡೋಣ ಅಂತ ಬಂದೆ.
ತಗೋ ಈ ದುಡ್ಡು. ಮಕ್ಕಳು ಇರುವವಳು, ತೆಗೆದುಕೋ. ಇನ್ನು ಹೆಚ್ಚು ಬೇಕಾದರೆ ಕೇಳು, ಕೊಡುತ್ತೇನೆ.
ನರಿ, ಮೊಲಕ್ಕೆ ಸಹಾಯ ಮಾಡಿದಂಗಾಯ್ತು. ನಿಮ್ಮ ದುಡ್ಡು ನೀವೇ ಇಟ್ಟುಕೊಳ್ಳಿ. ಪೊಲೀಸರು, ಕಾನೂನು, ಸರ್ಕಾರ ನನ್ನ ಪಾಲಿಗೆ ನ್ಯಾಯ ಕೊಡುತ್ತೆ ಅಂತ ನಂಬಿದ್ದೀನಿ.
ಅಯ್ಯೋ ಪಾಪ ಅಂದರೆ, ನೋಡು ಇವಳಿಗೆ ದುರಹಂಕಾರ! ಈ ಜಾತಿಯವಳಿಗೂ ನ್ಯಾಯ ಬೇಕಂತೆ. ನಿಮ್ಮ ಪಾಲಿಗೆ ಯಾರು ಇಲ್ಲ , ತಿಳಿದುಕೋ . ಧಿಮಾಕು ತೋರಿಸಿದರೆ ನಿನ್ನ ಗಂಡನಿಗೆ ಆದ ಗತಿನೇ ನಿನಗೂ ಆಗುತ್ತದೆ.
ನಾನು ನಿಮ್ಮ ಬೆದರಿಕೆಗೆಲ್ಲಾ ಹೆದರುವವಳಲ್ಲ. ಕಾಯ್ದೆ, ಕಾನೂನು ನಮ್ಮ ಪರ ಇದೆ. ಇಲ್ಲಿಂದ ತೊಲಗು.


ಸರೋಜ ದೂರು ಕೊಟ್ಟ ನಂತರ, ಸರ್ಕಾರದ ಅಧಿಕಾರಿಗಳು ಅವರ ಮನೆಗೆ ಭೇಟಿ ನೀಡುತ್ತಾರೆ.
ನೀವು ದೂರು ಕೊಟ್ಟಿದ್ದು ತಿಳಿಯಿತು. ನಿಮ್ಮ ಸಹಾಯಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಬಂದಿದ್ದೀವಿ.
ನೀವು ಕಾನೂನಿನ ಮೇಲೆ ಭರವಸೆ ಇಟ್ಟಿದಕ್ಕೆ ಧನ್ಯವಾದಗಳು. ಶಿವರಾಮಯ್ಯ ಮತ್ತು ಅವನ ಸ್ನೇಹಿತರನ್ನು ಬಂಧಿಸಿ, ನಿಮ್ಮ ಕುಟುಂಬಕ್ಕೆ ರಕ್ಷಣೆ ನೀಡುತ್ತೇವೆ..
ಧನ್ಯವಾದಗಳು. ನನ್ನ ದೂರು ಕಸದ ಬುಟ್ಟಿ ಸೇರುತ್ತೆ ಎಂದು ಅಂದುಕೊಂಡಿದ್ದೆ. ನೀವು ಇಷ್ಟು ಬೇಗ ಸ್ಪಂದಿಸುತ್ತಿರುವುದು ನೋಡಿ ತುಂಬ ಖುಷಿಯಾಗುತ್ತಿದೆ.
ಇಲ್ಲ ಸರೋಜಮ್ಮ, ತಡ ಮಾಡುವ ಮಾತೆ ಇಲ್ಲ. ಈ ನಿಮ್ಮ ನಿರ್ಧಾರ ತುಂಬಾ ಒಳ್ಳೆಯದು. ನಿಮ್ಮ ಕುಟುಂಬ ನಿರ್ವಹಣೆಗಾಗಿ ನಾವು ಧನ ಸಹಾಯವನ್ನೂ ಮಾಡುತ್ತೇವೆ.


ಪೊಲೀಸರು ಅಪರಾಧದ ಸ್ಥಳಕ್ಕೆ ಹೋಗಿ ಸಾಕ್ಷಾಧಾರಗಳನ್ನು (ಸಾಕ್ಷಾಧಾರಗಳು) ಕಲೆ ಹಾಕಿದ್ದಾರೆ. ಇದನ್ನು 'ಸ್ಥಳ ಮಹಜರ್ ' ಎಂದು ಕರೆಯಲಾಗುತ್ತದೆ.
ಪೊಲೀಸರು ಸರೋಜಾ ಕೊಟ್ಟಿರುವ ದೂರಿನ ಆಧಾರದ ಮೇಲೆ ಸಾಕ್ಷಿದಾರರ ಹೇಳಿಕೆಯನ್ನು ಪಡೆಯುತ್ತಾರೆ.
ಹೌದು ಸಾರ್. ಶಿವರಾಮಯ್ಯನ ಕಡೆಯವರು ಆಂಜಿನಪ್ಪನನ್ನು ಕರೆದುಕೊಂಡು ಹೋಗಿ ಹೊಡೆದದ್ದನ್ನ ನಾವು ನೋಡಿದ್ದೇವೆ ಸಾರ್.
ಎಸ್ ಸಿ / ಎಸ್ ಟಿ ಕಾಯ್ದೆ ಪ್ರಕಾರ ದೂರಿನಲ್ಲಿ ಹೆಸರಿಸಿರುವ ವ್ಯಕ್ತಿಗಳನ್ನು ಪೊಲೀಸರು ಕೂಡಲೇ ಬಂಧಿಸಿ ಶೀಘ್ರವಾಗಿ ವಿಶೇಷ ನ್ಯಾಯಾಲಯದಲ್ಲಿ ಹಾಜರು ಪಡಿಸಬೇಕು.


ಪ್ರಕರಣದ ವಿಚಾರಣೆ ಮುಗಿದ ನಂತರ - ವಿಶೇಷ ನ್ಯಾಯಾಲಯದಲ್ಲಿ
ಜಾತಿ ದೌರ್ಜನ್ಯ ಮಾಡುತ್ತಿರಾ ? ಎಲ್ಲರಲ್ಲೂ ಇರುವುದು ಕೆಂಪು ರಕ್ತ ಎನ್ನುವ ಪ್ರಜ್ಞೆ ಇಲ್ಲವೇ ? ನೀವು ಮಾಡಿರುವ ಅಪರಾಧ ಎಷ್ಟು ಘೋರವಾದುದ್ದು ಗೊತ್ತಿದೆಯೇ?
ಮೇಲ್ಜಾತಿಯವರು ಏನು ಮಾಡಿದರು ತಪ್ಪಿಸಿಕೊಳ್ಳಬಹುದು ಎನ್ನುವುದೆಲ್ಲ ಈಗ ನಡೆಯುವುದಿಲ್ಲ. ನಿಮ್ಮ ಮೂವರರಿಗೂ ತಲಾ ಹತ್ತು ವರ್ಷ ಜೈಲು ಶಿಕ್ಷೆ ಮತ್ತು ಇಪತ್ತೈದು ಸಾವಿರ ದಂಡ ವಿಧಿಸಲಾಗಿದೆ.
ಸರೋಜ ಅವರೇ , ಕಾನೂನಿನಲ್ಲಿ ನಂಬಿಕೆ ಇಟ್ಟಿದಕ್ಕೆ ಧನ್ಯವಾದಗಳು . ನಿಮ್ಮ ಈ ನಡೆ ಎಲ್ಲ ದಲಿತರಿಗೂ ದಾರಿಯಾಗಲಿ. ಎಸ್ ಸಿ /ಎಸ್ ಟಿ ದೌರ್ಜನ್ಯ ತಡೆ ಕಾಯ್ದೆಯನ್ನು ಇನ್ನು ಹೆಚ್ಚು ಜನ ಉಪಯೋಗಿಸಿಕೊಳ್ಳುವಂತಾಗಲಿ.


ದಲಿತರಿಗೆ ನ್ಯಾಯ ಎನ್ನುವ ಈ ಸಸಿಗೆ ನಾನು ಒಂದು ಸಣ್ಣ ಬೇರು.
ಮಾನವೀಯತೆಗೆ ಮಿಡಿಯುವ ಎಲ್ಲಾ ಮನಸ್ಸುಗಳು ಸೇರಿ ಈ ಸಸಿಯನ್ನು
ನ್ಯಾಯದ ಹೆಮ್ಮರವಾಗಿಸಬೇಕು. ಇದರ ನೆರಳಿನಲ್ಲಿ ಸಾವಿರಾರು ಬದುಕುಗಳು
ನೆಮ್ಮದಿಯಾಗಿ ಉಸಿರಾಡಬೇಕು.
ಜೈ ಭೀಮ್!

# ಪರಿಶಿಷ್ಠ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಠ ಪಂಗಡಗಳ (ಎಸ್.ಟಿ) ದೌರ್ಜನ್ಯ (ತಡೆ) ಕಾಯಿದೆಯನ್ನು ಉಪಯೋಗಿಸುವುದು ಹೇಗೆ

<u>ಮೂರು ಭಿತ್ತಪತ್ರಗಳು ಹಾಗು ಕೈಪಿಡಿಗಳು ಈ ವೆಬ್ ಸೈಟ್ ನಲ್ಲಿ ಲಭ್ಯವಿದೆ ಈ ವೆಬ್ ಸೈಟ್ ನಲ್ಲಿ ಲಭ್ಯವಿದೆ www.altlawforum.org</u>




ಪರಿಶಿಷ್ಠ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಠ ಪಂಗಡಗಳ (ಎಸ್.ಟಿ) ದೌರ್ಜನ್ಯ (ತಡೆ) ಕಾಯಿದೆ 1989, ಈ ಸಮುದಾಯಗಳನ್ನು ರಕ್ಷಿಸುವ ಕಾನೂನುಗಳಲ್ಲಿ ಅತ್ಯಂತ ಪ್ರಮುಖ ಕಾನೂನಾಗಿದೆ. ತಮ್ಮ ಜಾತಿಗಳ ಆಧಾರದ ಮೇಲೆ ದೌರ್ಜನ್ಯಗಳು ನಡೆಯುವುದು ಪರಿಶಿಷ್ಠ ಜಾತಿ ಮತ್ತು ಪಂಗಡಗಳಿಗೆ ಜೀವಂತ ಅನುಭವವಾಗಿದೆ. ಹಾಗಾಗಿ ಈ ಕಾಯ್ದೆ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯ. ಇದರ ಬಗ್ಗೆ ಮೂರು ಪೋಸ್ಟರ್‌ಗಳು ತಯಾರಿಸಿದ್ದೇವೆ. ಇವುಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಲಭ್ಯವಿವೆ. ಇವುಗಳ ಉದ್ದೇಶ ಜಾತಿ ದೌರ್ಜನ್ಯದಂತಹ ಘಟನೆಗಳ ಕುರಿತು ಜಾಗೃತಿಯನ್ನು ಮೂಡಿಸಿ, ಅವುಗಳನ್ನು ವರದಿ ಮಾಡಿ, ನ್ಯಾಯವನ್ನು ಪಡೆಯುವ ನಿಟ್ಟಿನಲ್ಲಿ ಹೋರಾಡುವುದಾಗಿದೆ. ಈ ಮಾಹಿತಿಯನ್ನು ಹೆಚ್ಚು ಜನರಿಗೆ ತಲುಪಿಸುವ ಸಲುವಾಗಿ, ನಿಮ್ಮ ಕಾರ್ಯವ್ಯಾಪ್ತಿಗಳಲ್ಲಿ ಇದನ್ನು ಅಳವಡಿಸಿಕೊಳ್ಳಬೇಕೆಂದು ಅಥವಾ ಡೌನ್‌ಲೋಡ್ ಮಾಡಿಕೊಂಡು ನಿಮ್ಮ ಸಂಸ್ಥೆ-ಸಂಘಟನೆಗಳಲ್ಲಿ ಹಂಚಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.

# ದೌರ್ಜನ್ಯ ದೂರಿನಲ್ಲಿರಬೇಕಾದ ಮಾಹಿತಿ

## ಪ್ರಥಮ ವರ್ತಮಾನ ವರದಿ ( ಎಫ್ .ಐ .ಆರ್ )

ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಸಲ್ಲಿಸಲಾದ ದೂರಿನ ಮೇರೆಗೆ ಅಥವ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ರಚಿಸಲಾದ ವಿಶೇಷ ನ್ಯಾಯಲಯದಲ್ಲಿ ಸಲ್ಲಿಸಲಾದ ಖಾಸಗಿ ದೂರಿನ ಮೇಲೆಗೆ ಎಫ್ .ಐ .ಆರ್ ದಾಖಲಿಸಲಾಗುವುದು . ಎಫ್ .ಐ .ಆರ್ ದಾಖಲಿಸಿದ ನಂತರ ಒಂದು ಪ್ರಕರಣದ ತನಿಖೆ ಪ್ರಾರಂಭವಾಗುತ್ತದೆ.



## 1. ಯಾರು?

1. ಮಾಹಿತಿ ನೀಡುವ ವ್ಯಕ್ತಿಯಾರು?
2. ನೊಂದವರು ಯಾರು?
3. ಆರೋಪಿಗಳು ಯಾರು ?
4. ಸಾಕ್ಷಿಗಳು ಯಾರು ?

ಪ್ರತಿಯೊಬ್ಬರಿಗೂ - ಅವರ ಹೆಸರು, ಅಡ್ಡ ಹೆಸರು, ತಂದೆಯ ಹೆಸರು, ಜಾತಿ, ವಯಸ್ಸು, ಲಿಂಗ, ಧರ್ಮ, ಉದ್ಯೋಗ, ಹಾಗು ಅರೋಪಿಗಳ ಹೆಸರು ಗೊತ್ತಿಲ್ಲದೆ ಇರುವಾಗ, ಅವರ ದೈಹಿಕ ವಿವರಗಳು

## 2. ಏನು?

ಘಟನೆಯ ವಿವರಗಳು

ಕೆಳಗೆ ವಿವರಿಸಿದಂತೆ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು

## 3. ಯಾಕೆ?

ಘಟನೆ ನಡೆಯಲು ಉದ್ದೇಶ ಏನು?

ಘಟನೆಯ ಹಿನ್ನಲೆ ಹಾಗು ಈ ಹಿಂದೆ ದೌರ್ಜನ್ಯ ನಡೆದಿದ್ದರೆ ಅದರ ವಿವರ, ಇತ್ಯಾದಿಯ ಮಾಹಿತಿ. ಆಧಾರವಿಲ್ಲದ ಆರೋಪಗಳನ್ನು ನೀಡಬಾರದು.

## 4. ಹೇಗೆ?

ದೌರ್ಜನ್ಯ ನಡೆದಿದ್ದು ಹೇಗೆ?

ಯಾವ ರೀತಿ ದೌರ್ಜನ್ಯಕ್ಕೆ ಒಳಪಟ್ಟರು(ಮೌಖಿಕ/ದೈಹಿಕ), ಆಯುಧಗಳು ಉಪಯೋಗಿಸಲ್ಪಟ್ಟಲ್ಲಿ ಅದರ ವಿವರಗಳು, ವಾಹನ ಉಪಯೋಗಿಸಲ್ಪಟ್ಟಲ್ಲಿ ಅದರ ವಿವರಗಳು, ಸ್ವತ್ತು ನಾಶವಾಗಿದ್ದರೆ ಅದರ ವಿವರಗಳು, ಪ್ರತಿ ಆರೋಪಿಯ ಪಾಲ್ಗೊಳ್ಳುವಿಕೆ ಇತ್ಯಾದಿ

## 5. ಎಲ್ಲಿ?

ಘಟನೆ ಎಲ್ಲೆ ನಡೆಯಿತು?

ಘಟನೆಯ ನಡೆದ ಸ್ಥಳದ ಚಕ್ಕುಬಂದಿ. ಗ್ರಾಮ, ಕೇರಿ, ಹೋಬಳಿ, ತಾಲ್ಲೂಕು, ಜಿಲ್ಲೆ, ಸ್ಥಳ ಗುರುತಿಸಲು ಹೆಗ್ಗುರುತುಗಳ ವಿವರ ಹಾಗು ಸ್ಥಳದ ಜನಪ್ರಿಯ ಹೆಸರು , ಇವುಗಳನ್ನು ದಾಖಲಿಸಬೇಕು.

## 6. ಯಾವಾಗ?

ಘಟನೆ ಯಾವಾಗ ನಡೆಯಿತು?

ದಿನಾಂಕ, ತಿಂಗಳು, ವರ್ಷ, ಸಮಯ, ಬಗ್ಗೆ ಸ್ಪಷ್ಟವಾಗಿ ವಿವರ ನೀಡಬೇಕು. ಸ್ಪಷ್ಟ ಮಾಹಿತಿ ಇಲ್ಲದಿದ್ದಲ್ಲಿ , ಸಮಯ ಗುರುತಿಸಲು ಇತರ ವಿವರಗಳು ನೀಡಬಹುದು - ಉದಾಹರಣೆಗೆ, ಆ ದಿವಸ ಸಂತೆ ಅಥವ ಹಬ್ಬ ಯಾವುದಾದರು ನಡೆಯುತಿತ್ತು ಇತ್ಯಾದಿ

ಸಾಧ್ಯವಾದಷ್ಟು ಬಾಧಿತರು/ಅವರ ಕುಟುಂಬದವರು ಸ್ಥಳೀಯ ಠಾಣೆಗೆ ಹೋಗಿ ದೂರು ನೀಡಬೇಕು. ಆಗದಿದ್ದಲ್ಲಿ ಘಟನೆಯನ್ನು ನೇರವಾಗಿ ನೋಡಿದತಂಹ ಕಾಳಜಿಯುಳ್ಳ ನಾಗರೀಕರೊಬ್ಬರು ದೂರನ್ನು ನೀಡಬಹುದು.

ದೂರು ನೀಡಿದ ತಕ್ಷಣ ಠಾಣಾಧಿಕಾರಿಗಳು ಎಫ್.ಐ.ಆರ್. ಅನ್ನು ದೌರ್ಜನ್ಯ ತಡೆ ಕಾಯ್ದೆ ಮತ್ತು ಭಾರತದಂಡ ಸಂಹಿತೆ ಕಾನೂನಿನ ,ಸೂಕ್ತ ಕಲಂಗಳ ಅಡಿಯಲ್ಲಿ ಎಫ್.ಐ.ಆರ್ ದಾಖಲಿಸಬೇಕು.

ಪೊಲೀಸ್ ಅಧಿಕಾರಗಳು, ಎಫ್.ಐ.ಆರ್. ದಾಖಲು ಆದ ತಕ್ಷಣದಲ್ಲಿ ದೂರುದಾರರಿಗೆ ಅದರ ಪ್ರತಿಯನ್ನು ಉಚಿತವಾಗಿ ನೀಡಬೇಕು. ದೂರುದಾರರು ಎಫ್.ಐ.ಅರ್. ಪ್ರತಿಯನ್ನು ಕೇಳದಿದ್ದರು ಅದರ ಪ್ರತಿಯನ್ನು ನೀಡಬೇಕು.



https://altlawforum.org/

# ಜಾತಿ ದೌರ್ಜನ್ಯ ಸಂಭವಿಸಿದಾಗ ವಿವಿಧ ಅಧಿಕಾರಿಗಳ ಜವಾಬ್ದಾರಿಗಳು



## ಪೊಲೀಸ್ (ಸರ್ಕಲ್ ಇನ್‌ಸ್‌ಪೆಕ್ಟರ್ ಅಥವ ಸಬ್ ಇನ್‌ಸ್‌ಪೆಕ್ಟರ್)

ದೌರ್ಜನ್ಯದ ದೂರು (ದೂರನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ನೀಡಿರಬಹುದು ) ಸ್ವೀಕರಿಸಿದ ಕೂಡಲೆ ಪೊಲೀಸರು (ಸರ್ಕಲ್ ಇನ್‌ಸ್‌ಪೆಕ್ಟರ್ ಅಥವ ಸಬ್ ಇನ್‌ಸ್‌ಪೆಕ್ಟರ್) ಎಫ್.ಐ.ಆರ್ ಅನ್ನು ನೋಂದಾಯಿಸಬೇಕು. ತನಿಖೆಯನ್ನು ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ದರ್ಜೆಗಿಂತ ಕಡಿಮೆ ಇಲ್ಲದ ಪೊಲೀಸ್ ಅಧಿಕಾರಿಯು ಕೈಗೊಳ್ಳಬೇಕು.

## ಜಿಲ್ಲಾ ಮ್ಯಾಜಿಸ್ಟ್ರೇಟ್/ಉಪ ವಿಭಾಗದ ಮ್ಯಾಜಿಸ್ಟ್ರೇಟ್/ಕಾರ್ಯಕಾರಿ ಮ್ಯಾಜಿಸ್ಟ್ರೇಟ್

ದೌರ್ಜನ್ಯದ ಬಗ್ಗೆ ಮಾಹಿತಿ ಸಿಕ್ಕಿದ ಕೂಡಲೆ, ಜಿಲ್ಲಾ ಮ್ಯಾಜಿಸ್ಟ್ರೇಟ್/ಉಪ ವಿಭಾಗದ ಮ್ಯಾಜಿಸ್ಟ್ರೇಟ್/ಕಾರ್ಯಕಾರಿ ಮ್ಯಾಜಿಸ್ಟ್ರೇಟ್ ತಕ್ಷಣ ಘಟನೆ ಸ್ಥಳಕ್ಕೆ ಭೇಟಿ ನೀಡಿ, ದೌರ್ಜನ್ಯದ ಪ್ರಮಾಣದ ಬಗ್ಗೆ ತಿಳಿದಿಕೊಂಡು ಸರ್ಕಾರಕ್ಕೆ ವರದಿಯನ್ನ ಸಲ್ಲಿಸತಕ್ಕದ್ದು. ಹಾಗೆಯೆ ಎಫ್.ಐ.ಆರ್ ನೋಂದಾಯಿಸುವಂತೆ ಕಚಿತಪಡಿಸಬೇಕು. ಸಂತ್ರಸ್ತರ ಕುಟುಂಬಕ್ಕೆ ಪರಿಹಾರ ದೊರಕುವಂತೆ ಕಚಿತಪಡಿಸಬೇಕು.





## ಪೊಲೀಸ್ ಸೂಪರಿಂಟೆಂಡೆಂಟ್

ದೌರ್ಜನ್ಯದ ಬಗ್ಗೆ ಮಾಹಿತಿ ಸಿಕ್ಕಿದ ಕೂಡಲೆ ಪೊಲಿಸ್ ಸೂಪರಿಂಟೆಂಡೆಂಟ್ ತಕ್ಷಣ ಘಟನೆ ಸ್ಥಳಕ್ಕೆ ಭೇಟಿ ನೀಡಿ ಎಫ್ .ಐ.ಆರ್ ದಾಖಲಿಸುವಂತೆ ಕಚಿತಪಡಿಸಬೇಕು. ಸ್ಥಳೀಯ ಪೊಲೀಸ್ ಅಧಿಕಾರಿಗಳು ಏಫ್.ಐ .ಆರ್ ದಾಖಲಿಸದೆ ಇದ್ದಲ್ಲಿ , ಎಫ್.ಐ.ಆರ್ ದಾಖಲಿಸುವಂತೆ ಆದೇಶಿಸಬೇಕು . ಹಾಗೆಯೆ ಘಟನೆ ನಡೆದ ಪ್ರದೇಶದಲ್ಲಿ ಪೊಲೀಸ್ ಬಲವನ್ನು ನಿಯೋಜಿಸತಕದ್ದು ಹಾಗು ಇತರ ನಿವಾರಣ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಪೊಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟ್

ಪೊಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟ್ ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ ಕಿರುಕುಳ ಮತ್ತು ಬೆದರಿಕೆ ಹಾಕುವುದರಿಂದ ರಕ್ಷಣೆ ನೀಡಬೇಕು . ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ 60 ದಿನಗಳೊಳಗೆ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.





## ವಿಶೇಶ ಸಾರ್ಜವನಿಕ ಅಭಿಯೋಜಕರು(ಎಸ್.ಪಿ.ಪಿ)

ವಿಚಾರಣೆಯಲ್ಲಿ ಸಂತ್ರಸ್ತರನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರವು ವಕೀಲರೊಬ್ಬರನ್ನು ಎಸ್.ಪಿ.ಪಿ ಆಗಿ ನೇಮಿಸುತ್ತದೆ. ಸಂತ್ರಸ್ತರಿಗೆ ತಮ್ಮ ಆಯ್ಕೆಯ ವಕೀಲರನ್ನು ಎಸ್.ಪಿ.ಪಿ ಯಾಗಿ ನೇಮಿಸಿಕೊಳ್ಳುವ ಹಕ್ಕಿದೆ. ನ್ಯಯಾಲಯದಲ್ಲಿ ವಿಚಾರಣೆ ನಡೆಸಬೇಕಾದ ಜವಾಬ್ದಾರಿ ಎಸ್.ಪಿ.ಪಿ ಯವರದ್ದು. ಎಸ್.ಪಿ.ಪಿ ರವರು ಸಂತ್ರಸ್ತರಿಗೆ ಹಾಗು ಅವರ ಅವಲಂಬಿತರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಬೇಕು. ಹಾಗೆಯೇ ಸಂತ್ರಸ್ತರಿಗೆ ಕಾನೂನು ನೆರವು (ಲೀಗಲ್ ಏಯ್ಡ್ ) ನೀಡಬೇಕು . ಎಸ್.ಪಿ.ಪಿ ರವರು ದೂರುದಾರರು /ಸಂತ್ರಸ್ತರು ಹಾಗು ಸಾಕ್ಷಿಗಳನ್ನು ವಿಚಾರಣೆಗೆ ಸಹ ಸಿದ್ಧಪಡಿಸಬೇಕು .